Ref.No. 243-2015

WW-2,

ದಿನಾಂಕಃ 12-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದಃ

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆಯನ್ನು 2008 ರಲ್ಲಿ ಸೇರಿಕೊಂಡಿರುತ್ತೇನೆ. ನಾನು 2 ನೇ ಪಾರ್ಟಿ ಸಂಸ್ಥೆಯನ್ನು ಸೇರಿಕೊಳ್ಳುವ ಮೊದಲು ಬೇರೆ ರಾಮನ್ ಫೈಬರ್ಸ್ ಸಂಸ್ಥೆಯಲ್ಲಿ ಕೆಲಸ ಮಾಡಿರುತ್ತೇನೆ. 2 ನೇ ಪಾರ್ಟಿ ಸಂಸ್ಥೆ ಯವರು ಕೆಲಸ ಖಾಲಿ ಇದೆ ಎಂದು ಅಲ್ಲಿ ಕೆಲಸ ಮಾಡುವವರು ನನಗೆ ತಿಳಿಸಿರುತ್ತಾರೆ ಆದುದರಿಂದ ನಾನು ಕೆಲಸಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. . ನಾನು 2008 ರಿಂದ 2013 ರವರೆಗೆ ನನ್ನ ಮತ್ತು ಆಡಳಿತ ವರ್ಗ ದವರ ಸಂಬಂಧ ಚೆನ್ನಾಗಿತ್ತು. ಸದರಿ ಅವಧಿಯಲ್ಲಿ ಕೆಲಸಗಾರರರಿಗೆ ನೋಟೀಸ್ ನೀಡುವುದಾಗಲೀ, ವಿಚಾರಣೆ ಮಾಡುವುದಾಗಲಿ ಮತ್ತು ಕೆಲಸದಿಂದ ತೆಗೆದುಹಾಕುವುದಾಗಲಿ ಆಗಿರುವುದಿಲ್ಲ ಎಂದರೆ ಸರಿ . ನಾನು 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಕೆಲಸ ಮಾಡುತ್ತಿರಬೇಕಾದರೆ 2013 ರಲ್ಲಿ ಯೂನಿಯನ್ ನ್ನು ರಚನೆ ಮಾಡಿರುವುದಿಲ್ಲ. ನಾನು ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಸುಮಾರು 250 ಜನ ಕೆಲಸಗಾರರರು ಇದ್ದರು . ನಾನು ಕೆಲಸ ಮಾಡುತ್ತಿದ್ದ ಸಂದರ್ಬದಲ್ಲಿ ಇ ಎಸ್ ಐ, ಪಿ ಎಫ್ ಮತ್ತು ಸಂಬಳ ಸರಿಯಾಗಿ ನೀಡುತ್ತಿದ್ದರು ಎಂಬ ಸೂಚನೆಗೆ ಸಾಕ್ಷಿದಾರರು ಮೊದಲು ಸರಿಯಾಗಿ ನೀಡುತ್ತಿದ್ದರು 2012 ರಿಂದ ಪಿ ಎಫ್ ಕಟ್ಟಿರುವುದಿಲ್ಲ ಸಂಬಳ ನೀಡುತ್ತಿದ್ದರು ಎಂದು ನುಡಿಯುತ್ತಾರೆ . 2013 ರಲ್ಲಿ ಆಡಳಿತ ವರ್ಗದವರ ವಿರುದ್ಧ ಹಲವಾರು ವಿವಾದಗಳನ್ನು ನಾವು ಕಾರ್ಮಿಕ ಇಲಾಖೆಯಲ್ಲಿ ಎತ್ತಿರುತ್ತೆವೆ ಎಂದರೆ ಸರಿ . ಅದೇ ರೀತಿ ವೇತನ ಪಾವತಿ ಕಾಯಿದೆ ಅಡಿಯಲ್ಲಿ ನಾಲ್ಕು ತಿಂಗಳ ಸಂಬಳವನ್ನು ನೀಡಿರುವುದಿಲ್ಲ ಎಂದು ವಿವಾದವನ್ನು ಎತ್ತಿದ್ದು ಅದರ ಬಗ್ಗೆ ಆದೇಶವೂ ಕೂಡ ಆಗಿರುತ್ತದೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆ ಯವರು ನಮಗೆ ಕೆಲಸವನ್ನು ನೀಡಿರುವುದಿಲ್ಲ ಎಂದು ನಾವು ಈ ಪ್ರಕರಣವನ್ನು ಎತ್ತಿರುತ್ತೇವೆ. ಸಾಕ್ಷಿಯು ಮುಂದುವರೆದು 2013 ರಿಂದ ಇಲ್ಲಿಯವರೆಗೆ ವೇತವನ್ನೂ ಕೂಡ ಕೇಳಿರುತ್ತೇವೆ. ಸರ್ಕಾರವು ಈ ನ್ಯಾಯಾಧೀಕರಣ ಕ್ಕೆ ಕಳುಹಿಸಿಕೊಟ್ಟಂತಹ ರೆಫರೆನ್ಸ್ ನಲ್ಲಿ ಜನವರಿ 2013 ರಿಂದ ವೇತನವನ್ನು ನೀಡಬೇಕು ಎಂದು ನಮೂದಿಸಲಾಗಿರುತ್ತದೆ ಆದರೆ ಎಲ್ಲಿಯವರೆಗೆ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿಯಲ್ಲ .

ಈ ಪ್ರಕರಣದಲ್ಲಿ ಕೇಳಿದಂತಹ ನಾಲ್ಕು ತಿಂಗಳ ಸಂಬಳವು ವೇತನ ಪಾವತಿ ಕಾಯಿದೆ ಅಡಿಯಲ್ಲಿ ಈಗಾಗಲೇ ಆದೇಶವಾಗಿರುವುದರಿಂದ ಈ ವಿವಾದವು ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ . ನಾವು ಸಂಘದ ಮೂಲಕ ಬೇಡಿಕೆಗಳನ್ನು ಆಡಳಿತ ವರ್ಗ ದವರ ಮುಂದೆ ಇಟ್ಟಿರುತ್ತೇವೆ ಎಂದರೆ ಸರಿಯಲ್ಲ .

ನಾವು ಸಂಘವನ್ನು ರಚಿಸಿದ ನಂತರ ಬೇಡಿಕೆಗಳನ್ನು ಆಡಳಿತ ವರ್ಗದವರ ಮುಂದೆ ಇಟ್ಟಾಗ ಅವರು ನಮ್ಮ ಸಂಘವನ್ನು ಗುರುತಿಸಿರುವುದಿಲ್ಲ ಆದುದರಿಂದ ನಾವು ಸ್ಟ್ರೈಕ್ ಮಾಡಿರುತ್ತೇವೆ ಎಂದರೆ ಸರಿಯಲ್ಲ . ನಾವು ಸ್ಟ್ರೈಕ್ ಮಾಡಿದಾಗ ಆಡಳಿತ ವರ್ಗದವರು ನ್ಯಾಯಾಲಕ್ಕೆ ಹೋಗಿ ನಮ್ಮ ವಿರುದ್ಧ ತಡೆಯಾಜ್ಞೆಯನ್ನು ತಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸ್ಟ್ರೈಕ್ ಮಾಡಿದ 14 ದಿನಗಳ ಮೊದಲು ಆಡಳಿತ ವರ್ಗ ಕ್ಕೆ ನೋಟೀಸ್ ನ್ನು ನೀಡಿರುವುದಿಲ್ಲ ಎಂಬ ಸೂಚನಗೆ ಸಾಕ್ಷಿದಾರರು ನಾವು ಸ್ಟ್ರೈಕ್ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ ನಾವು ಸ್ಟ್ರೈಕ್ ಮಾಡಿರುವುದಿಲ್ಲ ಆದುದರಿಂದ ಆಡಳಿತ ವರ್ಗದವರು ಲಾಕ್ ಔಟ್ ನ್ನೂ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ನಾವು ಸ್ಟ್ರೈಕ್ ಮಾಡಿರುವುದಿಲ್ಲ ಆದರೆ ಆಡಳಿತ ವರ್ಗ ಲಾಕ್ ಔಟ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಜನವರಿ / ಫೆಬ್ರವರಿಯಲ್ಲಿ ಲಾಕ್ ಔಟ್ ಆಗಿರುತ್ತದೆ. ನಿ ಡಬ್ಲ್ಯೂ- 4 ಟೈಂ ಇನ್ - ಟೈಂ ಔಟ್ ರಿಜಿಸ್ಟರ್ ಆಗಿರುತ್ತದೆ ಅಟೆಂಡೆನ್ಸ್ ರಿಜಿಸ್ಟರ್ ಆಗಿರುವುದಿಲ್ಲ ಎಂದರೆ ಸರಿಯಲ್ಲ . ನಿ ಡಬ್ಲ್ಯೂ- 4 ಕ್ಕೆ ಕೆಲವು ಕೆಲಸಗಾರರರು ಸಹಿ ಹಾಕಿರುತ್ತಾರೆ ಇನ್ನೂ ಕೆಲವರು ಹಾಕಿರುವುದಿಲ್ಲ ಎಂದರೆ ಸರಿ . ನಾವು ಕೆಲಸ ಮಾಡಿದ ಬಗ್ಗೆ ನಿ ಡಬ್ಲ್ಯೂ- 4 ನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . ನಮ್ಮ ಸಂಸ್ಥೆಯವರು ಯಾವುದೇ Land loosers ಗಳಿಗೆ ಕೆಲಸವನ್ನು ನೀಡಿರುವುದಿಲ್ಲ. Land loosers ಯಾರು ಯಾರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ .

2 ನೇ ಪಾರ್ಟಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.